ನಡೆಸುವಂತೆ ಆಜ್ಞಾಪಿಸಿರುವರು.''

''ಅದೂ ಸರಿಯೇ. ನನಗೆ ಯಾವಾಗಲೂ ಸ್ವಲ್ಪ ಆತುರ. ಇವತ್ತಿನಿಂದ ಎಚ್ಚರದಿಂದಿದ್ದು ಅರಮನೆಯಲ್ಲಿರೋ ಎಲ್ಲರ ಮೇಲೂ ಒಂದು ಕಣ್ಣು ಇಟ್ಟಿರುತ್ತೇನೆ.'' ಎಂದನು ಮಲ್ಲಿಕಾರ್ಜುನ.

''ಅಪ್ಪಾಜಿ ಆತನನ್ನು ತಡೆಯಲುಹೋಗಿ ತಿರುಗಿದ ಕಾರಣ ಚೂರಿ ಅವರ ಎದೆಯ ಸಮೀಪ ನಾಟಿತು. ಡಣ್ಣಾಯಕರು ಕೂಡಲೇ ವೈದ್ಯರನ್ನು ಕರೆಯಿಸಿ ಆರೈಕೆ ಮಾಡಿಸಿದರು. ನಮ್ಮ ಪರಿವಾರವನ್ನ ಸುರಕ್ಷಿತವಾಗಿ ರಾಜಧಾನಿ ಮುಟ್ಟಿಸಲು ಅವರೂ ಸಹ ತನ್ನ ಆಳುಗಳೊಂದಿಗೆ ಜೊತೆಯಾಗಿ ಬಂದಿರುವರು.''



''ಸದ್ಯ, ಬರಿ ಸಣ್ಣ ಗಾಯದೊಂದಿಗೆ ಆಪತ್ತಿನಿಂದ ಪಾರಾದರಲ್ಲ.'' ಎಂದು ನಿಟ್ಟುಸಿರೆಳೆದ ರಾಜಕುಮಾರ.

''ಹೌದು ಅಣ್ಣ. ಸೋಮೇ ದೇವರೇ ಅಪ್ಪಾಜಿಯವರನ್ನು ರಕ್ಷಿಸಿದ ದೇವರು.'' ವಿರೂಪಾಕ್ಷಿ ಮಾನಸಿಕವಾಗಿ ಸೋಮೇ ದೇವರಿಗೆ ಕೈ ಮುಗಿದಳು.

ಇಮ್ಮಡಿ ದೇವರಾಯರು ಮೃದು ಆಸನದಲ್ಲಿ ಒರಗಿ ಕುಳಿತಿರಲು ಸಮೀಪದಲ್ಲೇ ಮಹಾರಾಣಿ ಪೊನ್ನಲಾದೇವಿ ಚಿಂತಾಕ್ರಾಂತಳಾಗಿ ಕುಳಿತಿದ್ದಳು. ಎದುರಲ್ಲಿ ಎಲಹಂಕ ನಾಡಿನ ಪ್ರಧಾನಿ ಮಂಗಪ್ಪ ಡಣ್ಣಾಯಕರು ಮತ್ತು ಮಹಾ ಮಂತ್ರಿಗಳಾದ ಲಕ್ಕಣ್ಣ ದಂಡೇಶರು ಆಸೀನರಾಗಿದ್ದರು. ಮಹಾರಾಜರ ಜನ್ಮ ಕುಂಡಲಿಯನ್ನು ತೀವ್ರವಾಗಿ ಪರಿಶೀಲಿಸುತ್ತಿದ್ದ ಆಸ್ಥಾನ ಜ್ಯೋತಿಷಿಗಳ ಮೊಗವನ್ನೇ ಎಲ್ಲರೂ ಕುತೂಹಲದಿಂದ ನೋಡುತ್ತಿದ್ದರು.

''ಏನೆಂದು ಹೇಳಲಿ ಸ್ವಾಮೀ? ಮಹಾರಾಜರ ಜನ್ಮ ಕುಂಡಲಿಯನ್ನು ಎಷ್ಟು ಬಾರಿ ನೋಡಿದರೂ ಮನಸ್ಸು ತುಂಬಿ ಬರುತ್ತದೆ. ಅಷ್ಟು ಉನ್ನತವಾದ ಜಾತಕವಿದು. ಮಹೋನ್ನತವಾದ ವ್ಯಕ್ತಿತ್ವ, ಕಾರ್ಯ ನಿರ್ವಹಣೆಯಲ್ಲಿ ದಕ್ಷತೆ ಮತ್ತು ಮಹತ್ತರವಾದ ಸಾಧನೆ ಇವೆಲ್ಲ ಈ ಜಾತಕದ ವಿಶೇಷಗಳು.''

''ಸ್ವಾಮಿ, ಇದೆಲ್ಲ ಎಲ್ಲರಿಗೂ ತಿಳಿದ ಸಂಗತಿಯೇ ಅಲ್ಲವೇ? ನಮ್ಮ ವಿಶಾಲವಾದ ರಾಜ್ಯವನ್ನು ಮಹಾರಾಜರು ವಿಸ್ತರಿಸುತ್ತಲೇ ಇರುವರು. ನೌಕಾಪಡೆಯನ್ನು ಕಟ್ಟಿ ಕಡಲಾಚೆಯ ಸೀಮೆಗಳನ್ನು ಗೆದ್ದುಬಂದಿರುವರು. ಮಹಾರಾಜರಿಗೆ ಆ ದೇಶದವರು ಕಪ್ಪಕಾಣಿಕೆಗಳನ್ನು ತಪ್ಪದೇ ಸಲ್ಲಿಸುತ್ತಿರುವರು. ಇವೆಲ್ಲ ಲೋಕ ಪ್ರಖ್ಯಾತ ಸಂಗತಿಗಳು! ಹಾಗಿರಲು ಮಹಾರಾಜರ ಪ್ರಭಾವದ ಬಗ್ಗೆ ಕುಂಡಲಿ